**ಮಗಳ ಆಸೆಗೆ ದೇವರು ಅಸ್ತು ಅಂದಿರಬೇಕು. ಮನೆಬಾಗಿಲಲ್ಲಿ ಸುಂದರ ನಾಯಿಮರಿ!**

ಜರ್ಮನ್‌ಗೆ ಹೊರಡುವ ತಯಾರಿಯೂ ನಡೆದಿತ್ತು. ಏನಾದರೊಂದು ರಚನಾತ್ಮಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಸದಾ ಉತ್ಸುಕಳಾಗಿಯೇ ಇರುವ ಮಗಳಿಗೆ ಚಿಕ್ಕಂದಿನಿಂದಲೂ ನಾಯಿ–ಬೆಕ್ಕುಗಳೆಂದರೆ ಇಷ್ಟ. ಅವಳು ಚಿಕ್ಕವಳಿದ್ದಾಗ 'ಲವ್ ಬರ್ಡ್ಸ್' ತಂದುಕೊಟ್ಟಿದ್ದೆ. ಮೀನು ಸಾಕುವ ಅನುಭವವೂ ಇರುವ ಮಗಳಿಗೆ ನಾಯಿ ಬಗ್ಗೆ ವಿಪರೀತ ಆಸೆ. ಮುಂದಿನ ಮನೆಯ ಡಾಬರ್‌ಮನ್ ನಾಯಿಗೆ ರಸ್ಕ್–ಬಿಸ್ಕತ್ತುಗಳನ್ನು ಕೊಟ್ಟು ಅದರ ಪ್ರೀತಿ ಸಂಪಾದಿಸಿದ್ದ ಅವಳಿಗೆ ಅದರ ಒರಟುತನ ಮಾತ್ರ ಇಷ್ಟವಾಗಿರಲಿಲ್ಲ. ಗುರ್ ಎಂಬ ಮುಖವಾಡ ಧರಿಸಿಯೇ ಇರುವ ಡಾಬರ್‌ಮನ್ ಮಾತ್ರ ಬೇಡವೇ ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದಳು.

ಅವಳ ಆಸೆಗೆ ದೇವರು ಅಸ್ತು ಅಂದಿರಬೇಕೇನೋ? ಆ ಸುಂದರ ವಿದೇಶಿ ನಾಯಿಗಳ ಎರಕವೋ ಎಂಬಂತೆ ಈ ಬೀದಿ ನಾಯಿಮರಿ ಮನೆ ಬಾಗಿಲಲ್ಲೇ ಅವತರಿಸಿದೆ. ನಮ್ಮ ಪಕ್ಕದ ಆಚೀಚೆ ಬೀದಿಗಳ ಯಾವುದೋ ನಾಯಿಯ ಸಂತಾನ ಇದು. ಅಮ್ಮನನ್ನ ಅಗಲಿ ಬಂದಂತಿತ್ತು. ಸರಿ ಸುಮಾರು ಹದಿನೈದು ದಿನಗಳ ಪುಟ್ಟ ಮರಿ. ಪುಟುಪುಟನೆ ಹೆಜ್ಜೆಯಿಡುತ್ತಾ ನಡೆದಾಡಲೂ ಶಕ್ತಿ ಸಾಲದ ಈ ನಾಯಿಮರಿ ಇನ್ನೂ ತಲೆ ಎತ್ತಲೂ ಆಗದ ಪುಟಾಣಿ. ಪಿಳಿಪಿಳಿ ಕಣ್ಣುಬಿಡುತ್ತಾ ತೆವಳಿಕೊಂಡು ಮುಂದೆ ಮುಂದೆ ಸಾಗುತ್ತಾ ಅಲ್ಲೇ ಕವುಚಿಕೊಂಡು ಮಲಗಿಬಿಡುವ ಪಾಪದ ಕೂಸು ನಮ್ಮನೆಯ ಅಂಗಳದಲ್ಲಿ ಬಂದು ಕುಳಿತಿತ್ತು.

ಮೂವತ್ತು ಇಪ್ಪತ್ತರ ಅಳತೆಯ ಡಬಲ್ ರೂಮಿನ ಡ್ಯೂಪ್ಲೆಕ್ಸ್ ಮನೆ ನಮ್ಮದು. ಮನೆಯ ಮುಂದೆ ಸ್ಕೂಟರ್ ನಿಲ್ಲಿಸಲಷ್ಟೆ ಜಾಗ. ಇಂತಹ ನಮ್ಮ ಕುಟೀರದಲ್ಲಿ ಇದೀಗ ಈ ನಾಯಿಮರಿಗೊಂದು ಸೂರು. ಕುರ್ಚಿಯ ಕೆಳಗೆ, ಬಾಗಿಲ ಹಿಂದೆ, ಸೋಫಾ ಪಕ್ಕ – ಹೀಗೆಯೇ ದಿನಕ್ಕೊಂದು ಜಾಗ.

ಅದೊಂದು ಭಾನುವಾರ ಮಧ್ಯಾಹ್ನ ನಾನೊಂದು ಕಥೆ ಬರೆಯಲು ಉದ್ಯುಕ್ತನಾಗಿದ್ದೆ. ಕತೆಯ ಟಿಸಿಲು ಆಗಿನ್ನೂ ಚಿಗುರೊಡೆದಿತ್ತು. ಧ್ಯಾನಸ್ಥನಾಗಿದ್ದೆ. ಮಗಳು ಓಡೋಡಿ ಬಂದು ನಾಯಿಮರಿಗೆ 'ಬ್ರೂನೋ' ಎಂಬ ಹೆಸರಿಟ್ಟ ಕುರಿತು ಹೇಳಿದಳು. ಅವಳು ಸಣ್ಣಸಣ್ಣ ಸಂಗತಿಗಳಲ್ಲಿ ಸಂತೋಷವನ್ನು ಕಾಣುವಂತಹವಳು. ನಾನು ಎದ್ದು ನಾಯಿಮರಿಯ ಹತ್ತಿರ ಹೋಗಿ ಕುಳಿತು 'ಬ್ರೂನೋ' ಎಂದರಚಿದೆ. ಅದು ಪಿಳಿಪಿಳಿ ಕಣ್ಣುಬಿಡುತ್ತಾ ಮತ್ತೆ ಗೋಣು ಕೆಳಗೆ ಹಾಕಿ ನಿದ್ದೆ ಮಾಡತೊಡಗಿತು. ಮಗಳು ನಗುತ್ತಿದ್ದಳು.

ಎರಡು ತಿಂಗಳಾಗುವಷ್ಟರಲ್ಲಿ ಬ್ರೂನೋ ಮೈ ಕೈ ತುಂಬಿಕೊಂಡು ಮನೆ ತುಂಬಾ ಓಡಾಡುತ್ತಿದ್ದ. ಅವನ ಕೊರಳಿಗೊಂದು ಬಣ್ಣದ ಹಗ್ಗ ಹಾಕಿ ಕೈಲಿ ಹಿಡಿದು ಹೋಗುವುದೊಂದು ಖುಷಿ. ನಮ್ಮ ಬೀದಿಯ ಮಕ್ಕಳಿಗೆ ಬ್ರೂನೋ ಬಲು ಅಚ್ಚುಮೆಚ್ಚು. ಸಂಜೆಯಾದೊಡನೆ ಮಕ್ಕಳೆಲ್ಲಾ ಸೇರಿ ಬ್ರೂನೋ ಜೊತೆಯಲ್ಲಿ ರಸ್ತೆಯುದ್ದಕ್ಕೂ ಓಡಾಡಿ ಅರಚಾಡಿ ಆಟವಾಡಿ ಸಂಭ್ರಮಿಸುವುದು ಬ್ರೂನೋ ಇನ್ನಷ್ಟು ಗರಿಗೆದರಲು ಕಾರಣವಾಯ್ತು. ಈಗವನು ಭಾರೀ ತುಂಟ. ಮನೆಯ ಹತ್ತಿರ ಬರುವ ಐದಾರು ಬೀದಿ ನಾಯಿಮರಿಗಳನ್ನೂ ಹೆದರಿಸಿ ಓಡಿಸಿಕೊಂಡು ಹೋಗುವ ಅವನ ಧೈರ್ಯ ಪರಾಕ್ರಮಗಳಿಗೆ ಎಲ್ಲರ ಶಹಭಾಸ್‌ಗಿರಿ. ಇವನ ಜೊತೆ ಮಕ್ಕಳ ಸಾಥ್.

ಮಗಳಿಗಂತೂ ಮೂರೂ ಹೊತ್ತು ಬ್ರೂನೋದೇ ಧ್ಯಾನ. ಅದರ ನೆತ್ತಿಯನ್ನು ತುರಿಸಿ ಅದನ್ನು ಖುಷಿಪಡಿಸುತ್ತಿದ್ದಳು. ಅವನಿಗೆ ಬೇಕಾದ ಫ್ರೂಟ್ಸ್‌ಗಳನ್ನು ಪೀಸ್ ಮಾಡಿ ಹಾಕುವುದು, ಬ್ರೆಡ್, ಬಿಸ್ಕೆಟ್, ರಸ್ಕ್‌ಗಳನ್ನು ತಿನಿಸುವುದು. ಪೆಟ್ ಕ್ಲಿನಿಕ್‌ಗೆ ಹೋಗಿ ಕ್ಯಾಲ್ಸಿಯಂ ಫುಡ್ ಕೊಡಿಸುವುದು, ಬ್ರೂನೋ ಜೊತೆಯಲ್ಲಿ ಖುಷಿಯ ಕ್ಷಣಗಳನ್ನು ಎಂಜಾಯ್ ಮಾಡುವುದು ಮಗಳ ದೈನಿಕವೇ ಆಗಿಹೋಯ್ತು. ಬ್ರೂನೋಗೆ ಮಗಳ ಹಿಂದೆಮುಂದೆ ಚಂಗನೆ ನೆಗೆಯುತ್ತಾ ಓಡಾಡುವುದೊಂದು ಸಂಭ್ರಮ. ಒಂದೊಂದು ಸಾರಿ ಮಗಳ ಕಾಲಿಗೆ ಸುತ್ತಿಕೊಂಡು ಅವಳನ್ನು ಸತಾಯಿಸುತ್ತಿತ್ತು. ಮಗಳು ಕೋಪಗೊಂಡು ಅದನ್ನ ಸೋಫಾ ಕಾಲುಗಳಿಗೆ ಕಟ್ಟಿಹಾಕಿದರೆ ಭೂಮ್ಯಾಕಾಶ ಒಂದು ಮಾಡುವಂತೆ ಬೊಗಳುತ್ತಿತ್ತು. ಆಗವಳು ಅದರ ಮುಂದೆ ಕುಳಿತು ಮೈ ಸವರಿ ನೆತ್ತಿಯನ್ನು ತುರಿಸುತ್ತಿದ್ದಳು. ಅದೂ ಸಹ ಮಗಳ ಹಣೆ, ಕೆನ್ನೆ ಗಲ್ಲ, ಮೂಗುಗಳನ್ನು ತನ್ನ ನಾಲಿಗೆಯಿಂದ ನೆಕ್ಕುತ್ತಿತ್ತು.

ನನ್ನ ಹೆಂಡತಿ ಕಲಾಗೂ ಬ್ರೂನೋ ಎಂದರೆ ಅಚ್ಚುಮೆಚ್ಚು. ವಾರಕ್ಕೆರಡು ಸಾರಿ ಶ್ಯಾಂಪೂ ಹಾಕಿ ತಿಕ್ಕಿ ತಿಕ್ಕಿ ಸ್ನಾನ ಮಾಡಿಸಿ ಅದನ್ನು ಮಿರಮಿರ ಮಿರಗುವ ಹಾಗೆ ನೋಡಿಕೊಂಡವಳು ಅವಳೇ. ಹೆತ್ತಮಗುವನ್ನು ಮಡಿಲಲ್ಲಿ ಮಲಗಿಸಿಕೊಂಡ ಹಾಗೆ ತೊಡೆಯ ಮೇಲೆ ಬ್ರೂನೋ ಮಲಗಿಸಿಕೊಂಡು ಜೊಂಪು ಕೂದಲೊಳಗೆ ಹೇನುಗಳನ್ನು ಹೆಕ್ಕಿದವಳು ಅವಳೇ. ಬ್ರೂನೋ ಬಾಯೊಳಗೆ ಕೈಯಿಟ್ಟು ಕಚ್ಚು ಕಚ್ಚು ಎನ್ನುತ್ತಾ, ಯಾರಿಗೂ ಕಚ್ಚದಂತೆ ತಿಳಿಪಾಠ ಹೇಳಿದವಳು ಅವಳೇ.

ಅಮ್ಮನಿಗೆ ನಾಯಿ ಬೆಕ್ಕುಗಳೆಂದರೆ ಅಷ್ಟಕ್ಕಷ್ಟೆ. ಮೊದಮೊದಲು ಮನೆಗೆ ಬಂದ ಈ ನಾಯಿಮರಿಯನ್ನು ತುಂಬಾ ದೂರದಲ್ಲೇ ಇಟ್ಟುಬಿಟ್ಟಿದ್ದರು. ಹಾಲ್‌ನಲ್ಲಿ ಅವರು ಕುಳಿತು ಟೀವಿ ನೋಡುತ್ತಿದ್ದಾಗ ಬ್ರೂನೋ ಅಮ್ಮನ ಪಕ್ಕ ಕುಳಿತುಬಿಡುತ್ತಿದ್ದ. ಅಮ್ಮ ಜಿರಲೆ ಕಂಡವರಂತೆ ದೂರ ಸರಿದು ಗದರಿಸುತ್ತಿದ್ದರು. ಆಗ ಮಾತ್ರ ಬ್ರೂನೋ ಹೆದರಿ ಮೂಲೆಗೆ ಹೋಗಿ ಕುಳಿತುಬಿಡುತ್ತಿತ್ತು. ಬ್ರೂನೋ ನಮ್ಮ ಮನೆಗೆ ಬಂದು ಮೂರು ತಿಂಗಳಾದರೂ ಅಮ್ಮನ ಮನಸ್ಸನ್ನು ಗೆಲ್ಲಲಾಗಿರಲಿಲ್ಲ.

ಅವತ್ತೊಂದು ದಿನ ನನ್ನ ತಮ್ಮ, ಅಮ್ಮನನ್ನು ಕೆಲದಿನಗಳ ಮಟ್ಟಿಗೆ ತನ್ನ ಮನೆಗೆ ಕರೆದೊಯ್ಯಲು

